ಒಡಿಸಿ ಮೂಲ: ದೀಪ್ತಿ ಪಟನಾಯಕ
ಕನ್ನಡಕ್ಕೆ: ಶಾ.ಮಂ. ಕೃಷ್ಣರಾಯ
ಕಲೆ: ವೆಂಕಟ್ರಮಣ ಭಟ್

# ರೆಚೆಲ್ ಕಾಟೇಜ್



ಬೆಂಗಳೂರು ಕಂಟೋನ್ಮೆಂಟ್ ಸ್ಟೇಷನ್ ಹತ್ತಿರ ರೈಲು ತಲುಪುತ್ತಿರುವಾಗಲೇ ಸುಷಮಾಳ ಮೊಬೈಲ್ ಸದ್ದು ಮಾಡತೊಡಗಿತು. ಅತ್ತಕಡೆಯಿಂದ ಮೊಮ್ಮಗಳ ಸ್ವರ ಕೇಳುತ್ತಿತ್ತು. 'ನೆರೆ ಬಂದದ್ದರಿಂದ ರೈಲು ಆರು ಗಂಟೆ ಲೇಟು. ಗಾಬರಿಯಾಗ್‌ಬೇಡಿ. ಬೋಗಿಯ ಬಾಗಿಲಲ್ಲಿ ಮೊದಲೇ ಸಾಮಾನು ತಂದಿಟ್ಕೊಳ್ಳಿ. ಬೆಂಗಳೂರು ಸ್ಟೇಷನ್ನಿಗೆ ಹೋಗದೆ ಕಂಟೋನ್ಮೆಂಟಿನಲ್ಲಿ ಇಳಿದುಬಿಡಿ. ಇಲ್ಲಿ ನಾವು ನಿಮ್ಮನ್ನು ಕಾಯ್ತಾ ಇದ್ದೇವೆ. ಈ ಬಾರಿ ನಿಮಗೊಂದು ಸರ್‌ಪ್ರೈಸ್ ಇದೆ. ಬಂದಾಗ ತೋರಿಸ್ತೀನಿ.'

ಈ ಬಾರಿ ಅವಳಿಗೆ ಮೂರು ವಾರ ಬೆಂಗಳೂರಿನಲ್ಲಿ ಇರಬೇಕಾಗಿದೆ. ಮಗಳು ಬೇರೆ ಊರಿಗೆ ಟ್ರೈನಿಂಗಿಗೆ ಹೋಗಬೇಕಾದುದರಿಂದ ಅವಳು ಬರುವವರೆಗೂ ಮೊಮ್ಮಕ್ಕಳನ್ನು ನೋಡಿಕೊಂಡು ಮನೆಯಲ್ಲಿರಬೇಕಾಗಿದೆ. 15 ವರ್ಷದ ಮೊಮ್ಮಗಳು ಐದು ವರ್ಷದ ಮೊಮ್ಮಗ. ಇಬ್ಬರೂ ತುಂಬ ಹುರುಪಿನಿಂದ ಅಜ್ಜಿಯ ಬರುವಿಕೆಯನ್ನು ಕಾಯುತ್ತಿದ್ದರು. ಆಗಾಗ್ಗೆ ಅಜ್ಜಿಗೆ ಫೋನು ಮಾಡಿ ಏನೇನೊ ಕೀಟಲೆ ಮಾಡುತ್ತಿದ್ದರು. ಇಂದು ಅಜ್ಜಿ ಬರುತ್ತಾಳೆಂಬ ಉತ್ಸಾಹ. ಸ್ಟೇಷನ್ನಿಗೆ ಅಜ್ಜಿ ಬರುವುದನ್ನೇ ಕಾಯುತ್ತಾ ನಿಂತಿದ್ದರು.

ಆ–ಈ ಮಾತುಗಳಲ್ಲಿ ದಾರಿ ಕ್ರಮಿಸಿದ್ದು